# IV ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ

OS.No. 1191/2015

DW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 23-01-2023.**

ಪಾಟೀ ಸವಾಲು ವಾದಿಪರ ವಕೀಲರು ಶ್ರೀ.VST ರವರಿಂದ.

ನಾನು 7 ನೇ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತೇನೆ. ಕನ್ನಡ ಓದಲು ಬರುತ್ತದೆ. 1 ಮತ್ತು 3 ನೇ ಪ್ರತಿವಾದಿ ನನ್ನ ಸಹೋದರಿಯರು. 2 ನೇ ಪ್ರತಿವಾದಿ ನನ್ನ ತಮ್ಮ. 1 ರಿಂದ 3 ನೇ ಪ್ರತಿವಾದಿಗಳು ಶಾಲೆಗೆ ಹೋಗಿರುವುದಿಲ್ಲ, ಸಹಿಯನ್ನು ಮಾಡುವುದನ್ನು ಮಾತ್ರ ಕಲಿತಿರುತ್ತಾರೆ ಎನ್ನುತ್ತಾರೆ.

2. ನನ್ನ ತಂದೆಯ ಹೆಸರು ಅಪ್ಪಯ್ಯ ಮಲ್ಲಪ್ಪ ವಣ್ಣಾರಿ. ದಾವಾಸ್ವತ್ತನ್ನು ನಿಮ್ಮ ತಂದೆ ದಿನಾಂಕಃ 16-08-1974 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಖಗಿರೀದಿ ಸಮಯದಲ್ಲಿ ದಾವಾಸ್ವತ್ತಿನ ಪಂಚಾಯಿತಿ ನಂ.447 ಇತ್ತು ತದನಂತರ 532 ಆಗಿರುತ್ತದೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಿಪಿ.4 ರಂತೆ ನಮ್ಮ ಎಲ್ಲರ ಹೆಸರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ನಮೂದು ಆಗಿರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ವಿಸ್ತೀರ್ಣ ಪೂರ್ವ, ಪಶ್ಚಿಮ 13 ಅಡಿ ದಕ್ಷಿಣ, ಉತ್ತರ 60 ಅಡಿ ಎಂದರೆ ಸರಿ. ನಿಪಿ. 4 ರಲ್ಲಿ ಆದ ಠರಾವಿನಂತೆ ಪೂರ್ವ ಭಾಗದ 13 ಅಡಿಯಲ್ಲಿ 3 ಅಡಿ ಬಿಟ್ಟು ಉಳಿದ ಉಳಿದ ಜಾಗಕ್ಕೆ ನೀವು ನಿಮ್ಮ ಹೆಸರಿಗೆ ಅಚ್ಚಲು ಅಡ್ಡಿ ಇಲ್ಲ ಎಂದು ಠರಾವು ಆಗಿರುತ್ತದೆ ಎಂದರೆ ಸರಿ. ಸದರಿ ಠರಾವಿನಂತೆ ದಾವಾಸ್ವತ್ತು ಪೂರ್ವ, ಪಶ್ಚಿಮದ ಕಡೆ 13 ಅಡಿಯಲ್ಲಿ 3 ಅಡಿ ಬಿಟ್ಟರೆ ಈಗ ಪೂರ್ವ, ಪಶ್ಚಿಮ 10 ಅಡಿ ಉತ್ತರ, ದಕ್ಷಿಣ 60 ಬರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯವರು ತನ್ನ 1/4 ಹಿಸ್ಸೆಯನ್ನು ವಾದಿಗೆ ನೀಡಬೇಕು ಎಂದು ಖರೀದಿ ಕರಾರು ಪತ್ರ ಮಾಡಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ನನ್ನ ವಿರುದ್ಧ ಹಾಗೂ 2 ಮತ್ತು 3 ನೇ ಪ್ರತಿವಾದಿ ವಿರುದ್ಧ ವಿಭಾಗ ಕೋರಿ ದಾವೆ ನಂ.970/2015 ಹೂಡಿದ್ದರು ಎಂದರೆ ಸರಿ. ಸಾಕ್ಷಿಗೆ ನಿಮ್ಮ ತಂಗಿಯವರು ಸಹಿ ಮಾಡುತ್ತಾರ ಎಂದರೆ ಸಹಿ ಮಾಡುತ್ತಾರೆ ಎಂದು ಹೇಳಿದ್ದು ತದನಂತರ ಸಹಿ ಮಾಡುವುದಿಲ್ಲ ಹೆಬ್ಬಟ್ಟು ಒತ್ತುತ್ತಾರೆ ಎಂದು ಹೇಳಿರುತ್ತಾರೆ. ಸಾಕ್ಷಿಗೆ 1 ನೇ ಪ್ರತಿವಾದಿ ಸಲ್ಲಿಸಿದ ವಕಾಲತನ್ನು ತೋರಿಸುತಿದ್ದು 1 ನೇ ಪ್ರತಿವಾದಿ ವಕೀಲರ ಮೂಲಕ ಹಾಜರಾಗಿರುತ್ತಾರೆ ಹಾಗೂ ವಕಾಲತ್ತಿನಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸಹಿ ಮಾಡಿರುವುದಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಸಾವಿತ್ರಿ ಎಂದು ಬರೆಯಿವುದಿಲ್ಲ ಸಾಸಿ ಎಂದು ಸಹಿ ಮಾಡುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸೂಳೆ ಬಾವಿಯಲ್ಲಿ ಕನ್ನಡ ಪ್ರಥಮಿಕ ಶಾಲೆ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಜನ್ಮ ದಿನಾಂಕಃ20-05-1953 ಎಂದರೆ ಸರಿ. 1 ನೇ ಪ್ರತಿವಾದಿ 2 ತರಗತಿಯವರೆಗೂ ಕಲಿತಿರುತ್ತಾರೆ ಎಂದರೆ ಸರಿ. ನಿಪಿ. 25 ಮುಖ್ಯ ಉಪಾಧ್ಯಯರು ಸೂಳೆ ಬಾಯಿ ನೀಡಿದ

ಪ್ರಮಾಣ ಪತ್ರ ಎಂದರೆ ಸರಿ. ಸಾಕ್ಷಿಗೆ ನಿಪಿ. 24 ನ್ನು ತೋರಿಸುತಿದ್ದು ಪ್ರತಿವಾದಿ 3 ರವರು ದಿನಾಂಕಃ 22-05-1961 ಲ್ಲಿ ಜನಿಸಿದ್ದು ಹಾಗೂ ಅವರು 4 ನೇ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತಾರೆ ಎಂದರೆ ಸರಿ. ಈ ದಾವೆ ಯಾವ ಕಾರಣಕ್ಕಾಗಿ ಹೂಡಿರುತ್ತದೆ ಎಂದು ನನಗೆ ತಿಳಿದಿದೆ. ವಾದಿ ಕರಾರು ಪತ್ರದಂತೆ ಖರೀದಿ ಪತ್ರ ಬರೆದುಕೊಡಬೇಕು ಎಂದು ದಾವೆ ಹೂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಪಿ. 19 ಹಾಗೂ 1 ನೇ ಪ್ರತಿವಾದಿ ಸಲ್ಲಿಸಿದ ವಕಾಲತನ್ನು ತೋರಿಸುತಿದ್ದು ಎರಡು ಸಹಿಗಳು ಒಂದೇ ರೀತಿ ಇರುತ್ತವೆ ಎಂದರೆ ಸಾಕ್ಷಿ ನೋಡಿ ಒಂದೇ ರೀತಿ ಇರುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ ಸಾಕ್ಷಿ ಮುಂದುವರೆದು ಅವರು ಸಹಿ ಮಾಡಿರುವುದಿಲ್ಲ ಎನ್ನುತ್ತಾರೆ. ಆದ ಕಾರಣ ಒಪ್ಪಿಗೆ ಇಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಯ ವಕೀಲರು ಎಂ.ಎನ್ ಕುಲಕರ್ಣಿಯವರಾಗಿದ್ದು ಅವರ ಕಛೇರಿಯಲ್ಲಿ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ. 19 ರಲ್ಲಿ ಕಾಣುವ ಭಾವಚಿತ್ರ 1 ನೇ ಪ್ರತಿವಾದಿಯದ್ದು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಡೂಪ್ಲಿಕೇಟ್ ಎನ್ನುತ್ತಾರೆ. 1 ನೇ ಪ್ರತಿವಾದಿ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ಹಾಗೂ ಪೊಟೋ ತನ್ನದಲ್ಲ ಎಂದು ದೂರು ನೀಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಸಹೋದರ ಮತ್ತು ಸಹೋದರಿಯರ ನಡುವೆಯ ಸಂಬಂಧ ಚನ್ನಾಗಿರುತ್ತದೆ. ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ 1 ನೇ ಪ್ರತಿವಾದಿನ್ನು ಭೇಟಿಯಾಗಿರುತ್ತೀರ ಎಂದರೆ ಸಾಕ್ಷಿ ಇಲ್ಲ 6 ತಿಂಗಳ ಹಿಂದೆ ಭೇಟಿಯಾಗಿದ್ದೆ ಎನ್ನುತ್ತಾರೆ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನೀಡಬಹುದ ಎಂದರೆ ಸಾಕ್ಷಿ ಇಲ್ಲ ಅವರಿಗೆ ಶುಗರ್ ಬಿ.ಪಿ ಇರುತ್ತದೆ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಶುಗರ್ ಮತ್ತು ಬಿ.ಪಿ ಇದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲಾಗುವುದ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಒಂದು ಪೊಟೋವನ್ನು ತೋರಿಸುತಿದ್ದು ದಾವೆ ಚಾಲ್ತಿ ಇದ್ದ ಸಮಯದಲ್ಲಿ 5 ನೇ ಪ್ರತಿವಾದಿಯವರು ಪೊಟೋದಲ್ಲಿ ಕಾಣುತ್ತಿರುವ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಪೊಟೋವನ್ನು ನೋಡಿ ಸಾಕ್ಷಿ ಒಪ್ಪಿಕೊಂಡಿರುತ್ತಾರೆ ಸದರಿ ಪೊಟೋವನ್ನು ಒಪ್ಪಿಕೊಂಡ ಮೇರೆಗೆ ನಿಡಿ 52 ಎಂದು ಗುರುತಿಸಲಾಯಿತು. ದಾವೆ ಹಾಕುವ ಸಮಯದಲ್ಲಿ ನಿಪಿ. 7 ರಂತೆ ವಸ್ತುಸ್ಥಿತಿ ಇತ್ತು ಎಂದರೆ ಸರಿ. 5 ನೇ ಪ್ರತಿವಾದಿಯವರು ಪೂರ್ವ, ಪಶ್ಚಿಮ 13 ಅಡಿಯಲ್ಲಿ ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ ನಾನು ಮತ್ತು ನನ್ನ ಸಹೋದರಿಯರು ದಾನಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ನೀವು 5 ನೇ ಪ್ರತಿವಾದಿಗೆ ಭಕ್ಷೀಸು ಪತ್ರ ಮಾಡಿಕೊಡುವ ಪೂರ್ವದಲ್ಲಿ 2 ನೇ ಪ್ರತಿವಾದಿಗೆ ನೀವು ಮತ್ತು ನಿಮ್ಮ ಸಹೋದರಿಯರು ಭಕ್ಷೀಸು ಪತ್ರ ಮಾಡಿಕೊಟ್ಟಿರುತ್ತೀರ ಎಂದರೆ ಸಾಕ್ಷಿ ನನಗೆ ತಿಳಿಯುತ್ತಿಲ್ಲ ಎನ್ನುತ್ತಾರೆ. ನಿಪಿ. 19 ಮತ್ತು 20 ರಂತೆ ಖರೀದಿ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದು 1 ನೇ ಪ್ರತಿವಾದಿ ಯಾವ ದಾವೆಯನ್ನು ಸಲ್ಲಿಸಿರುವುದಿಲ್ಲ. ನಾವಾಗಲಿ 2 ನೇ ಪ್ರತಿವಾದಿಯಾಗಲಿ ವಾದಿಯೊಂದಿಗೆ ಯಾವುದೇ ಖರೀದಿ ಕರಾರು ಪತ್ರ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ವಾದಿಯೊಂದಿಗೆ ಖರೀದಿ ಪತ್ರ ವ್ಯವಹಾರ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರೆ ದೊಡ್ಡವರು ಇರುತ್ತಾರೆ ಮಾಡಿರುತ್ತಾರೆ ಎನ್ನುತ್ತಾರೆ.

3. ನ್ಯಾಯಾಲಯದಿಂದ ನನಗೆ ಸಾಕ್ಷಿ ನುಡಿಯಲು ಸಮನ್ಸ ಬಂದಿರುವುದಿಲ್ಲ. ವಕೀಲರು ತಯಾರು ಮಾಡಿರುತ್ತಾರೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. DW.1 ರವರು ನನ್ನೊಂದಿಗೆ ಬಂದಿರುತ್ತಾರೆ ನ್ಯಾಯಾಲಯದಲ್ಲಿ ಇರುತ್ತಾರೆ ಎಂದರೆ ಸರಿ. ಮುಖ್ಯ ವಿಚಾರಣೆ ಇಂಗ್ಲೀಷ್ನಲ್ಲಿ ಇರುತ್ತದೆ ನಿಮಗೆ ಅರ್ಥವಾಗುವುದಿಲ್ಲ ಎಂದರೆ ಸರಿ. ವಕೀಲರು ಹಾಗೂ ಸಿದ್ದಬಸವ ಬಸವಲಿಂಗಯ್ಯರವರು ಸಹಿ ಮಾಡಿ ಎಂದ ಕಾರಣ ನೀವು ಸಹಿ ಮಾಡಿರುತ್ತೀರಿ ಹಾಗೂ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ. 5 ನೇ ಪ್ರತಿವಾದಿಗೆ ಸಹಾಯ ಮಾಡು ಉದ್ದೇಶದಿಂದ ಸಾಕ್ಷಿ ನುಡಿಯುತಿದ್ದೀರಿ ಎಂದರೆ ಸರಿಯಲ್ಲ.

4. ವೈಯಕ್ತಿಕವಾಗಿ ನನಗೆ ಭಕ್ಷೀಸು ಪತ್ರದ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ಭಕ್ಷೀಸು ಪತ್ರವನ್ನು ಯಾಕೆ ಬರೆಯುತ್ತಾರೆ ಏನು ಕಾರಣ ಹೇಳಲಾಗುವುದಿಲ್ಲ. ಭಕ್ಷೀಸು ಪತ್ರಕ್ಕೆ ಸಾಕ್ಷಿದಾರರು ಯಾರು ಎಂದು ಹೇಳಲಾಗುವುದ ಎಂದರೆ ಸಾಕ್ಷಿ ಹೇಳಲಾಗುವುದಿಲ್ಲ ನಾವು ನಾಲ್ಕು ಜನ ಹೋಗಿದ್ದೆವು ಗುಡಿಯವರು ಬಂದದ್ದರು ಎನ್ನುತ್ತಾರೆ. 1 ನೇ ಪ್ರತಿವಾದಿ ಸಲ್ಲಿಸಿದ ವಿಭಾಗ ದಾವೆಯನ್ನು ನೀವು ವಾದಿ ಬಸವಂತರವರ ವಿರುದ್ಧ ಸುಳ್ಳು ಆಪಾಧನೆಯನ್ನು ಮಾಡಿ ವಜಾ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಉಳಿದ ಪ್ರತಿವಾದಿಗಳ ಹೇಳಿಕೆಯಂತೆ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

Sd/-

4 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ